ಸೃಜನಿ

ISSN: 2583-3510

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 109-114
Bi-Monthly, Peer-Reviewed, Open Access, Indexed Journal

SIRDF JOURNALS
editor@srujani.in
www.srujani.in

# ಭಾರತದಲ್ಲಿ ರಾಷ್ಟ್ರಾಧ್ಯಕ್ಷರ ಚುನಾವಣೆ: ಒಂದು ಕಿರುನೋಟ

**ಅರುಣಕುಮಾರ್. ಪಿ* ಮತ್ತು ಡಾ. ಮೌನೇಶ್ವರ ಶ್ರೀನಿವಾಸರಾವ್****

*ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು. **ಮುಖ್ಯಸ್ಥರು ಮತ್ತು ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ವಿಶ್ವವಿದ್ಯಾಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

**Abstract:**

*ಸ್ವಾತಂತ್ರ್ಯಪೂರ್ವದಲ್ಲಿ ನಮ್ಮ ದೇಶದ ಸಾಮಾನ್ಯ ಜನರಿಗೆ ರಾಜಕೀಯ ಅರಿವಿನ ಕೊರತೆಯಿತ್ತು. ಏಕೆಂದರೆ ಬಹಳ ಹಿಂದಿನ ಕಾಲದಿಂದಲೂ ರಾಜ ಮಹಾರಾಜರುಗಳು ಆಳುತ್ತಿದ್ದರು. ರಾಜರುಗಳ ನಡುವಿನ ಭಿನ್ನಾಭಿಪ್ರಾಯಗಳ ಪರಿಣಾಮದಿಂದಾಗಿ ವಿದೇಶಿಯರು, ಬಹುಮುಖ್ಯವಾಗಿ ಬ್ರಿಟಿಷರು ಭಾರತದ ಮೇಲೆ ಸಂಪೂರ್ಣವಾಗಿ ನಿಯಂತ್ರಣ ಸಾಧಿಸಿದರು. ಇದರಿಂದಾಗಿ ವಸಾಹತುಶಾಹಿ ಆಡಳಿತ ಪ್ರಾರಂಭವಾಯಿತು. ಕಾಲಕ್ರಮೇಣ ಈ ದೇಶದ ಜನರಲ್ಲಿ ಹೋರಾಟದ ಮನೋಭಾವನೆ ಮೂಡಿ ಬ್ರಿಟಿಷರ ವಿರುದ್ಧ ಹೋರಾಟ ಪ್ರಾರಂಭಿಸಿದರು. ಸುದೀರ್ಘ ಹೋರಾಟದ ಫಲವಾಗಿ ಭಾರತವು 1947ರ, ಆಗಸ್ಟ್ 15ರಂದು ಸ್ವಾತಂತ್ರ್ಯ ಪಡೆಯುವ ಮೂಲಕ, ಸಂಸದೀಯ ಮಾದರಿಯ ಸರ್ಕಾರ ಪದ್ಧತಿಯನ್ನು ಅಳವಡಿಸಿಕೊಂಡಿತು. ಇದರಿಂದಾಗಿ ನಾಮಮಾತ್ರ ಕಾರ್ಯಾಂಗ ಮತ್ತು ನೈಜ ಕಾರ್ಯಾಂಗ ಎಂಬ ಎರಡು ಪದ್ಧತಿಗಳು ಸೃಷ್ಠಿಯಾದವು. ರಾಷ್ಟ್ರಾಧ್ಯಕ್ಷರು ನಾಮಮಾತ್ರ ಕಾರ್ಯಾಂಗವಾದರೆ ಪ್ರಧಾನಮಂತ್ರಿ ಮತ್ತು ಸಚಿವ ಸಂಪುಟ ನೈಜ ಕಾರ್ಯಾಂಗವಾಯಿತು. ನೈಜಕಾರ್ಯಾಂಗದ ಮುಖ್ಯಸ್ಥರಾಗಿರುವ ಪ್ರಧಾನಮಂತ್ರಿಯ ಆಯ್ಕೆಗೆ ಯಾವುದೇ ರೀತಿಯ ಚುನಾವಣೆಗಳು ನಡೆಯುವುದಿಲ್ಲ. ಬದಲಿಗೆ, ಲೋಕಸಭೆಯಲ್ಲಿ ಬಹುಮತ ಪಡೆದ ಪಕ್ಷದ ನಾಯಕನನ್ನು ಪ್ರಧಾನಮಂತ್ರಿಯಾಗಿ ಆಯ್ಕೆ ಮಾಡಲಾಗುತ್ತದೆ. ಆದರೆ, ನಾಮಮಾತ್ರ ಕಾರ್ಯಾಂಗದ ಮುಖ್ಯಸ್ಥರಾಗಿರುವ ರಾಷ್ಟ್ರಾಧ್ಯಕ್ಷರನ್ನು ಪರೋಕ್ಷ ಚುನಾವಣೆಯ ಮೂಲಕ ಆಯ್ಕೆ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಭಾರದ ರಾಷ್ಟ್ರಾಧ್ಯಕ್ಷರ ಚುನಾವಣೆಯ ಸಾಧಕ ಬಾಧಕಗಳನ್ನು ಕುರಿತು ವಿಶ್ಲೇಷಣೆ ಮಾಡುವುದು ಈ ಲೇಖನದ ಸಾರಾಂಶವಾಗಿದೆ.*

**Keywords:** *ಚುನಾವಣೆ, ರಾಷ್ಟ್ರಾಧ್ಯಕ್ಷರು, ನಾಮಮಾತ್ರ ಕಾರ್ಯಾಂಗ, ಚುನಾವಣಾ ಆಯೋಗ.*

## ಪೀಠಿಕೆ

ಭಾರತ ದೇಶವು ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವ ಹಂತದಲ್ಲಿಯೇ ದೇಶಕ್ಕೆ ಅಗತ್ಯವಾದ ಸಂವಿಧಾನ ರಚನೆಯ ಕಾರ್ಯವೂ ಸಹ ಪ್ರಾರಂಭವಾಯಿತು. ಸಂವಿಧಾನ ರಚನಾ ಸಭೆಯು ಕ್ಯಾಬಿನೆಟ್ ಆಯೋಗದ ಸಲಹೆಯ ಮೇರೆಗೆ 1946ರ ಜುಲೈನಲ್ಲಿ ಪರೋಕ್ಷ ಚುನಾವಣೆಯ ಮೂಲಕ ಆಯ್ಕೆಯಾದ ಸದಸ್ಯರಿಂದ ಕಾರ್ಯ ಚಟುವಟಿಕೆ ಪ್ರಾರಂಭಿಸಿತು. ಇದಕ್ಕೆ ಪೂರಕವಾಗಿ ಡಿಸೆಂಬರ್ 9, 1946ರಂದು ಪ್ರಥಮ ಅಧಿವೇಶನ ಸೇರುವ ಮೂಲಕ ಸಂವಿಧಾನ ರಚನೆಯ ಪ್ರಕ್ರಿಯೆಯನ್ನು ಪ್ರಾರಂಭಿಸಲಾಯಿತು. ಇದು ಸುಮಾರು 2 ವರ್ಷ 11 ತಿಂಗಳು 18 ದಿನಗಳ ಸುದೀರ್ಘ ಸಮಯವನ್ನು ತೆಗೆದುಕೊಂಡು ಅಂತಿಮ ಚಿತ್ರಣವನ್ನು ಪಡೆಯಿತು. ಈ ಹಂತದಲ್ಲಿ ಸಾಕಷ್ಟು ವಿಚಾರಗಳನ್ನು ಕುರಿತು

***Please cite this article as:*** ಅರುಣಕುಮಾರ್. ಪಿ ಮತ್ತು ಮೌನೇಶ್ವರ ಶ್ರೀನಿವಾಸರಾವ್ (2022). ಭಾರತದಲ್ಲಿ ರಾಷ್ಟ್ರಾಧ್ಯಕ್ಷರ ಚುನಾವಣೆ: ಒಂದು ಕಿರುನೋಟ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(3), 109–114.

ಚರ್ಚಿಸಲಾಯಿತು. ವಿಶೇಷವಾಗಿ ನಮ್ಮ ದೇಶಕ್ಕೆ ಯಾವ ದೇಶದ ಮಾದರಿಯ ಸರ್ಕಾರ ಅಳವಡಿಸಿಕೊಳ್ಳಬೇಕು ಎಂಬುದರ ಕುರಿತಾಗಿಯೂ ಚರ್ಚೆ ನಡೆಯಿತು. ಅಮೇರಿಕಾ ದೇಶದಲ್ಲಿರುವಂತಹ ಅಧ್ಯಕ್ಷೀಯ ಸರ್ಕಾರ ಪದ್ಧತಿ, ಐರಿಷ್ ದೇಶದಲ್ಲಿರುವ ಸರ್ಕಾರ ಪದ್ಧತಿ, ಬ್ರಿಟನ್ ದೇಶದ ಸರ್ಕಾರ ಪದ್ಧತಿ, ಫ್ರೆಂಚ್ ದೇಶದ ಸರ್ಕಾರ ಪದ್ಧತಿ ಹೀಗೆ ವಿವಿಧ ದೇಶಗಳಲ್ಲಿರುವ ಸರ್ಕಾರಿ ಪದ್ಧತಿಗಳ ಬಗ್ಗೆ ಚರ್ಚಿಸಿ ಅಂತಿಮವಾಗಿ ಬ್ರಿಟನ್ ದೇಶದ ಸಂಸದೀಯ ಸರ್ಕಾರವನ್ನು ಅಳವಡಿಸಿಕೊಳ್ಳುವುದೆಂದು ತೀರ್ಮಾನಿಸಲಾಯಿತು. ಅದರ ಪ್ರಕಾರ ನಾಮಮಾತ್ರ ಹಾಗೂ ನೈಜ ಕಾರ್ಯಾಂಗೆಂಬ ಎರಡು ಪದ್ಧತಿಗಳನ್ನು ಒಪ್ಪಿಕೊಳ್ಳಲಾಯಿತು. ಬ್ರಿಟನ್ ದೇಶದಲ್ಲಿ ನಾಮಮಾತ್ರ ಕಾರ್ಯಾಂಗವಾಗಿರುವ ರಾಷ್ಟ್ರಾಧ್ಯಕ್ಷರ ಹುದ್ದೆಗೆ ಅರಸು ಮನೆತನದವರು ವಂಶಪಾರಂಪರ್ಯವಾಗಿ ಮುಂದುವರೆಯುವುದು ಅಲ್ಲಿನ ಸಂಪ್ರದಾಯವಾಗಿದೆ. ಆದರೆ, ನಮ್ಮ ದೇಶದಲ್ಲಿ ರಾಷ್ಟ್ರದ ಮುಖ್ಯಸ್ಥರಾಗುವ ರಾಷ್ಟ್ರಾಧ್ಯಕ್ಷರನ್ನು ವಂಶಪಾರಂಪರ್ಯವಾಗಿ ಮುಂದುವರೆಸದೆ ಚುನಾವಣೆಯ ಮೂಲಕ ಆಯ್ಕೆ ಮಾಡುವುದು ಎಂಬ ನಿರ್ಧಾರಕ್ಕೆ ಬರಲಾಯಿತು. ಅದರನ್ವಯ ಭಾರತದ ರಾಷ್ಟ್ರಾಧ್ಯಕ್ಷರನ್ನು ಹೇಗೆ ಆಯ್ಕೆ ಮಾಡಬೇಕು ಎಂಬುದನ್ನು ಸಂವಿಧಾನ ರಚನಾ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು.

ರಾಷ್ಟ್ರಾಧ್ಯಕ್ಷರನ್ನು ಪ್ರತ್ಯಕ್ಷವಾಗಿ ಚುನಾಯಿಸಬೇಕೆಂದು ಸಂವಿಧಾನದ ರಚನಾ ಸಭೆಯಲ್ಲಿ ಕೆ.ಟಿ.ಷಾ ವಾದಿಸಿದರು.[1] ಅದೇ ರೀತಿ ಶ್ರೀ ಗೋಪಿಕೃಷ್ಣ ವಿಜಯವರ್ಗಿಯ (ಗ್ವಾಲಿಯರ್ ರಾಜ್ಯ) ಒಕ್ಕೂಟದ ರಾಷ್ಟ್ರಾಧ್ಯಕ್ಷರನ್ನು ವಯಸ್ಕ ಮತದಾನ ಪದ್ಧತಿಯ ಆಧಾರದ ಮೇಲೆ ನೇರವಾಗಿ ಚುನಾಯಿಸಬೇಕೆಂಬ ತಿದ್ದುಪಡಿಯನ್ನು ಮಂಡಿಸಿದ್ದರು,[2] ಅದೇ ರೀತಿ ಪ್ರೊ. ಶಿಬನ್ಲಾಲ್ ಸಕ್ಸೇನ (ಸಂಯುಕ್ತ ಪ್ರಾಂತ್ಯಗಳು: ಸಾಮಾನ್ಯ) ಅವರು ರಾಷ್ಟ್ರಾಧ್ಯಕ್ಷರನ್ನು ವಯಸ್ಕ ಮತದಾನದ ಆಧಾರದ ಮೇಲೆ ಜನರಿಂದ ನೇರವಾಗಿ ಆಯ್ಕೆ ಮಾಡಬೇಕೆಂದು ಅಭಿಪ್ರಾಯ ಪಟ್ಟಿದ್ದರು.[3] ಆದರೆ, ಇದಕ್ಕೆ ಎಲ್ಲರೂ ಬೆಂಬಲ ಸೂಚಿಸಲಿಲ್ಲ ಬದಲಿಗೆ ಸಂಸತ್ತಿನ ಸದಸ್ಯರಿಂದ ಆಯ್ಕೆಯಾಗಬೇಕೆಂದು ಅಭಿಪ್ರಾಯಪಟ್ಟರು. ಸುದೀರ್ಘ ಚರ್ಚೆಯ ನಂತರ ಜವಾಹರಲಾಲ್ ನೆಹರು ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಸೂತ್ರವನ್ನು ಅಂಗೀಕರಿಸಿ ರಾಷ್ಟ್ರಾಧ್ಯಕ್ಷರನ್ನು ಪರೋಕ್ಷವಾಗಿ ಚುನಾಯಿಸಬೇಕೆಂದು ತಿಳಿಸಿದರು. ನೆಹರು ಅವರು ಪಾರ್ಲಿಮೆಂಟರಿ ಪದ್ಧತಿಯಲ್ಲಿ ಮಂತ್ರಿಮಂಡಲ ಮತ್ತು ಸಂಸತ್ತಿಗೆ ಹೆಚ್ಚು ಅಧಿಕಾರವಿರುವುದರಿಂದ ರಾಷ್ಟ್ರಾಧ್ಯಕ್ಷರಿಗೆ ಕಡಿಮೆ ಅಧಿಕಾರವಿರುತ್ತದೆ. ಅವರ ಸ್ಥಾನವು ಕೇವಲ ಗೌರವಯುತವಾದುದು ಎಂದು ತಿಳಿಸುವ ಮೂಲಕ ಪರೋಕ್ಷ ಚುನಾವಣೆಯನ್ನು ಸಮರ್ಥಿಸಿಕೊಂಡರು.[4] ಡಾ. ಬಿ.ಆರ್. ಅಂಬೇಡ್ಕರ್ ಅವರು ಮೂರು ಕಾರಣಗಳನ್ನು ನೀಡಿ ಪರೋಕ್ಷ ಚುನಾವಣೆಯನ್ನು ಬೆಂಬಲಿಸಿದ್ದಾರೆ. ಅವುಗಳೆಂದರೆ 1. ಭಾರತದಲ್ಲಿರುವ ಹೆಚ್ಚು ಮತದಾರರ ಸಂಖ್ಯೆ. 2. ಪ್ರತ್ಯಕ್ಷ ಚುನಾವಣೆಯಿಂದ ಆಡಳಿತಕ್ಕೆ ಹೆಚ್ಚು ಹೊರೆಯಾಗುತ್ತದೆ. 3. ರಾಷ್ಟ್ರಾಧ್ಯಕ್ಷರು ಕೇವಲ ನಾಮಮಾತ್ರ ಅಧ್ಯಕ್ಷರು.[5]

**ರಾಷ್ಟ್ರಾಧ್ಯಕ್ಷರ ಚುನಾವಣೆಗೆ ಸಂಬಂಧಿಸಿದಂತೆ ಸಂವಿಧಾನಿಕ ಅವಕಾಶಗಳು**

ಭಾರತ ಸಂವಿಧಾನದ 54 ಮತ್ತು 55ನೇ ವಿಧಿಗಳಲ್ಲಿ ರಾಷ್ಟ್ರಾಧ್ಯಕ್ಷರು ಮತ್ತು ಉಪರಾಷ್ಟ್ರಪತಿಯವರ ಚುನಾವಣಾ ನಿಯಮಗಳನ್ನು ತಿಳಿಸಲಾಗಿದೆ. 54ನೇ ವಿಧಿಯು ರಾಷ್ಟ್ರಾಧ್ಯಕ್ಷರ ಚುನಾವಣೆ ಬಗ್ಗೆ ಹೇಳುತ್ತದೆ. ಈ ವಿಧಿಯ ಪ್ರಕಾರ ರಾಷ್ಟ್ರಾಧ್ಯಕ್ಷರನ್ನು ಪರೋಕ್ಷ ಚುನಾವಣೆಯ ಮೂಲಕ ಆಯ್ಕೆ ಮಾಡಲಾಗುತ್ತದೆ. ಸಂಸತ್ತಿನ ಉಭಯ ಸದನಗಳ ಹಾಗೂ ಪ್ರತಿಯೊಂದು ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಚುನಾಯಿತ ಸದಸ್ಯರನ್ನು ಒಳಗೊಂಡ ವಿಶೇಷ ಮತದಾರರ ವರ್ಗ

ಇವರ ಚುನಾವಣೆಯಲ್ಲಿ ಭಾಗವಹಿಸುತ್ತದೆ. ರಾಷ್ಟ್ರಾಧ್ಯಕ್ಷರ ಚುನಾವಣೆಗಳಲ್ಲಿ ರಾಜ್ಯಗಳ ಪ್ರಾತಿನಿಧ್ಯತೆಯಲ್ಲಿ ಕಾರ್ಯತಃ ಸಾಧ್ಯವೆನಿಸುವ ಮಟ್ಟಿಗೆ ಏಕ ಪ್ರಕಾರದ ಪ್ರಮಾಣ ಇರಬೇಕೆಂದು 55 (1)ನೇ ವಿಧಿಯು ತಿಳಿಸುತ್ತದೆ. 55 (2)ನೇ ವಿಧಿಯ ಪ್ರಕಾರ ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ವಿಧಾನ ಸಭೆಗಳ ಪ್ರತಿಯೊಬ್ಬ ಚುನಾಯಿತ ಸದಸ್ಯರು ಮತ್ತು ಸಂಸತ್ತಿನ ಪ್ರತಿಯೊಬ್ಬ ಚುನಾಯಿತ ಸದಸ್ಯರು ಎಷ್ಟು ಮತಗಳನ್ನು ಚಲಾಯಿಸಲು ಅರ್ಹರು ಎಂಬುದನ್ನು ಕೆಳಕಂಡಂತೆ ನಿರ್ಧರಿಸಬೇಕು.[6]

ರಾಜ್ಯದ ಒಟ್ಟು ಜನಸಂಖ್ಯೆಯನ್ನು (1971ರ ಜನಗಣತಿ) ವಿಧಾನ ಸಭೆಯ ಒಟ್ಟು ಚುನಾಯಿತ ಸ್ಥಾನಗಳಿಂದ ಭಾಗಿಸಿ, ಬರುವ ಭಾಗಲಬ್ಧವನ್ನು ಮತ್ತೆ 1000 ದಿಂದ ಭಾಗಿಸಬೇಕು. ಆಗ ಬರುವ ಮೊತ್ತವೇ ಆಯಾ ರಾಜ್ಯದ  ವಿಧಾನಸಭೆಯ ಚುನಾಯಿತ ಸದಸ್ಯರೊಬ್ಬರ ಮತದ ಮೌಲ್ಯ ದೊರೆಯುತ್ತದೆ. ಉದಾಹರಣೆಗೆ ಕರ್ನಾಟಕದ ಲೆಕ್ಕಾಚಾರವನ್ನು ತೆಗೆದುಕೊಳ್ಳುವುದಾದರೇ 1971ರ ಜನಗಣತಿ ಪ್ರಕಾರ ಕರ್ನಾಟಕದ ಜನಸಂಖ್ಯೆ 2,92,99,014 ಆಗಿತ್ತು ಹಾಗೂ ವಿಧಾನಸಭೆಯ ಚುನಾಯಿತ ಸದಸ್ಯರ ಸಂಖ್ಯೆ 224 ಆಗಿದೆ. ಈಗ ನಾವು ಕರ್ನಾಟಕದ ಜನಸಂಖ್ಯೆಯನ್ನು ವಿಧಾನಸಭೆಯ ಚುನಾಯಿತ ಸದಸ್ಯರ ಸ್ಥಾನದಿಂದ ಭಾಗಿಸಿದಾಗ 1,30,799.16 ಮೊತ್ತ ಬರುತ್ತದೆ. ಈ ಮೊತ್ತವನ್ನು ಪುನಃ 1000ದಿಂದ ಭಾಗಿಸಿದಾಗ 130,79 ಮೌಲ್ಯ ಬರುತ್ತದೆ. ಇದನ್ನು ಪೂರ್ಣಾಂಕ ಮಾಡಿದಾಗ  ಪ್ರತಿಯೊಬ್ಬ ಸದಸ್ಯರ ಮತವು 131 ಆಗುತ್ತದೆ.

ಸಂಸದರ ಮತ ಮೌಲ್ಯವನ್ನು ನೋಡುವುದಾದರೆ, ಲೊಕಸಭೆಯಲ್ಲಿ ಒಟ್ಟು ಚುನಾಯಿತ ಸದಸ್ಯರು 543 ಹಾಗೂ ರಾಜ್ಯಸಭೆಯಲ್ಲಿ ಚುನಾಯಿತ ಸದಸ್ಯರು 233 ಇದ್ದಾರೆ. ಈ ಎರಡೂ ಸದನಗಳಿಂದ ಒಟ್ಟು 776 ಸಂಸದರು ಇದ್ದಾರೆ. ಈಗ ಎಲ್ಲಾ ರಾಜ್ಯಗಳ ವಿಧಾನ ಸಭೆಗಳ ಸದಸ್ಯರ ಒಟ್ಟು ಮತಗಳ ಸಂಖ್ಯೆಯನ್ನು ಸಂಸತ್ತಿನ ಒಟ್ಟು ಚುನಾಯಿತ ಸದಸ್ಯರ ಸಂಖ್ಯೆಯಿಂದ ಭಾಗಿಸಿದರೆ, ಸಂಸತ್ತಿನ ಸದಸ್ಯರೊಬ್ಬರು ಎಷ್ಟು ಮತಗಳನ್ನು ಚಲಾಯಿಸಲು ಅರ್ಹರು ಎಂಬುದನ್ನು ಕಂಡು ಹಿಡಿಯಬಹುದು. ಅಂದರೆ ಎಲ್ಲಾ ರಾಜ್ಯಗಳ ವಿಧಾನಸಭೆಯ ಚುನಾಯಿತ ಸದಸ್ಯರ ಮತಗಳು ಒಟ್ಟಿಗೆ ಸೇರಿದಾಗ 5.43 ಲಕ್ಷ ಮೊತ್ತವನ್ನು 776 ಸಂಸದರ ಸಂಖ್ಯೆಯಿಂದ ಭಾಗಿಸಿದಾಗ 699.74 ಬರುತ್ತದೆ.ಇದನ್ನು ಪೂರ್ಣಾಂಕಕ್ಕೆ ತೆಗೆದುಕೊಂಡಾಗ 700 ಆಗುತ್ತದೆ. (2022ರ ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಬಂದ ಮತದ ಮೌಲ್ಯ)[7]

ರಾಷ್ಟ್ರಾಧ್ಯಕ್ಷರ ಚುನಾವಣೆ ರಹಸ್ಯ ಮತದಾನ ಪದ್ಧತಿಯ ಮೂಲಕ ನಡೆಯಬೇಕು. ಈ ಚುನಾವಣೆಯಲ್ಲಿ ಥಾಮಸ್ ಹೇರ್ ಪ್ರತಿಪಾದಿಸಿರುವ ಏಕ ಮತ ವರ್ಗಾಯಿಸುವ ಪ್ರಮಾಣಾನುಗುಣ ಪದ್ಧತಿಯನ್ನು ಅನುಸರಿಸಬೇಕು. ಆದ್ದರಿಂದ ಸಂಸತ್ತಿನ ಮತ್ತು ವಿಧಾನ ಸಭೆಗಳ ಸದಸ್ಯರು ತಮ್ಮ ಮತವನ್ನು ಚಲಾಯಿಸುವಾಗ ಅಭ್ಯರ್ಥಿಗಳ ಹೆಸರಿನ ಮುಂದೆ ಆಧ್ಯತೆಗಳನ್ನು 1, 2, 3, 4, 5 ಈ ರೀತಿ ಅಂಕಿಗಳಿಂದ ವ್ಯಕ್ತ ಪಡಿಸಬೇಕು.

ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಎಷ್ಟು ಜನ ಅಭ್ಯರ್ಥಿಗಳು ಸ್ಪರ್ಧಿಸುತ್ತಾರೋ ಅವರೆಲ್ಲರಿಗೂ ಪ್ರಾಶಸ್ತ್ಯ ಮತಗಳನ್ನು ನೀಡಬೇಕಾಗುತ್ತದೆ. ಆದರೆ, ಒಬ್ಬ ಅಭ್ಯರ್ಥಿಯನ್ನು ಮಾತ್ರ ಚುನಾಯಿಸಬೇಕಾಗುತ್ತದೆ. ಮೊದಲೇ ನಿರ್ಧರಿಸಿದಂತೆ ನಿರ್ದಿಷ್ಟ ಕೋಟಾ ಮತಗಳನ್ನು ಪಡೆದ ಅಭ್ಯರ್ಥಿ ರಾಷ್ಟ್ರಾಧ್ಯಕ್ಷರಾಗಿ ಆಯ್ಕೆ ಆಗುತ್ತಾರೆ. ಇವರ ಚುನಾವಣೆ ಮುಗಿದ ನಂತರ ಮತ ಎಣಿಕೆ ಕಾರ್ಯದಲ್ಲಿ ಮೊದಲ ಪ್ರಾಶಸ್ತ್ಯ ಮತಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಮೊದಲ ಎಣಿಕೆಯಲ್ಲಿ ಯಾವ ಅಭ್ಯರ್ಥಿಗೂ ನಿರ್ದಿಷ್ಟ ಮತಗಳು ಬರದಿದ್ದಾಗ ಎರಡನೇ ಎಣಿಕೆ ಆರಂಭವಾಗುತ್ತದೆ. ಆಗ ಅತ್ಯಂತ

ಕಡಿಮೆ ಮೊದಲನೇ ಆದ್ಯತೆ ಪಡೆದಿರುವ ಅಭ್ಯರ್ಥಿಯ ಹೆಸರನ್ನು ಕೈ ಬಿಡಲಾಗುತ್ತದೆ. ಆತನ ಮತ ಚೀಟಿಗಳಲ್ಲಿರುವ ಎರಡನೇ ಆದ್ಯತೆ ಮತಗಳನ್ನು ಇತರ ಅಭ್ಯರ್ಥಿಗಳಿಗೆ ವರ್ಗಾಯಿಸಲಾಗುತ್ತದೆ. ಒಬ್ಬ ಅಭ್ಯರ್ಥಿಯು ನಿರ್ದಿಷ್ಟ ಅಥವಾ ಹೆಚ್ಚು ಮತಗಳನ್ನು ಪಡೆಯುವವರೆಗೂ ಈ ರೀತಿ ಮತಗಳ ಎಣಿಕೆ ಮುಂದುವರೆಯುವುದು. 1974ರ ರಾಷ್ಟ್ರಾಧ್ಯಕ್ಷರ ಚುನಾವಣಾ ಕಾಯಿದೆ ಪ್ರಕಾರ, ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಯು 2500 ರೂಪಾಯಿಗಳ ಠೇವಣಿಯನ್ನು ಕಟ್ಟಬೇಕಿತ್ತು ಮತ್ತು ಅವರ ನಾಮಪತ್ರವು 10 ಜನ ಮತದಾರರಿಂದ ಸೂಚಿಸಲ್ಪಡಬೇಕಿತ್ತು. ಹಾಗೂ 10 ಮಂದಿ ಮತದಾರರಿಂದ ಅನುಮೋದಿಸಲ್ಪಡಬೇಕಿತ್ತು. 1997ರ ಜೂನ್ ತಿಂಗಳಲ್ಲಿ ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಮೂಲಕ ಠೇವಣಿ ಹಣವನ್ನು 2500 ದಿಂದ 15000ಕ್ಕೆ ಹೆಚ್ಚಿಸಿತು. ಅಭ್ಯರ್ಥಿಯ ಸೂಚನಾಕಾರರ ಮತ್ತು ಅನುಮೋದಕರ ಸಂಖ್ಯೆಯನ್ನು 10 ಜನರಿಂದ 50 ಜನಕ್ಕೆ ಹೆಚ್ಚಿಸಲಾಯಿತು. ಈ ಸುಗ್ರೀವಾಜ್ಞೆಗೆ ಸಂಸತ್ತು ಆಗಸ್ಟ್, 1997ರಂದು ಒಪ್ಪಿಗೆ ಸೂಚಿಸಿತು.[8]

**ಕೋಷ್ಟಕ 1: ಭಾರತದಲ್ಲಿ 1952 ರಿಂದ 2022 ರವರೆಗೆ ನಡೆದಿರುವ ರಾಷ್ಟ್ರಾಧ್ಯಕ್ಷರ ಚುನಾವಣೆಗಳ ವಿವರ**

| ಕ್ರ.ಸಂ. | ರಾಷ್ಟ್ರಾಧ್ಯಕ್ಷರು | ಚುನಾವಣೆ ನಡೆದ ವರ್ಷ | ಪಡೆದ ಮತಗಳು | ಎರಡನೇ ಸ್ಥಾನ ಪಡೆದ ಅಭ್ಯರ್ಥಿ |
|---|---|---|---|---|
| 1 | ಡಾ. ಬಾಬು ರಾಜೇಂದ್ರಪ್ರಸಾದ್ | ಮೇ 2, 1952 | 5,07,400 (ಶೇ.83.31) | ಕೆ.ಟಿ.ಷಾ |
| 2 | ಡಾ. ಬಾಬು ರಾಜೇಂದ್ರ ಪ್ರಸಾದ್ | ಮೇ, 6, 1957 | 4,59,698 (ಶೇ.98.99) | ಎನ್.ಎನ್.ದಾಸ್ |
| 3 | ಎಸ್. ರಾಧಾಕೃಷ್ಣನ್ | ಮೇ 7, 1962 | 5,53,067 (ಶೇ.98.25) | ಹರಿರಾಮ್ |
| 4 | ಜಾಕೀರ್ ಹುಸೇನ್ | ಮೇ 6, 1967 | 4,71,244 (ಶೇ.56.23) | ಕೆ.ಸುಬ್ಬರಾವ್ |
| 5 | ವಿ.ವಿ.ಗಿರಿ | ಆಗಸ್ಟ್ 15, 1969 | 4,01,515 (ಶೇ.48.01) | ನೀಲಂ ಸಂಜೀವ ರೆಡ್ಡಿ |
| 6 | ಫಕ್ರುದ್ದೀನ್ ಆಲಿ ಅಹಮ್ಮದ್ | ಆಗಸ್ಟ್ 17, 1974 | 7,65,587(ಶೇ.80.18) | ಟಿ.ಎನ್. ಚೌಧರಿ |
| 7 | ನೀಲಂ ಸಂಜೀವ ರೆಡ್ಡಿ | ಆಗಸ್ಟ್ 6, 1977 | ಅವಿರೋಧ ಆಯ್ಕೆ | – |
| 8 | ಗ್ಯಾನಿ ಜೈಲ್ ಸಿಂಗ್ | ಜುಲೈ 13, 1982 | 7,54,113 (ಶೇ.72.73) | ಹೆಚ್. ಆರ್. ಖನ್ನ |
| 9 | ಆರ್. ವೆಂಕಟರಾಮನ್ | ಜುಲೈ 13, 1987 | 7,40,148 (ಶೇ.72.29) | ವಿ. ಕೃಷ್ಣ ಅಯ್ಯರ್ |
| 10 | ಶಂಕರ ದಯಾಳ ಶರ್ಮಾ | ಜುಲೈ 13, 1992 | 6,75,804 (ಶೇ.65.86) | ಜಿ.ಜಿ.ಸ್ವೆಲ್ |
| 11 | ಕೆ.ಆರ್.ನಾರಾಯಣ್ | ಜುಲೈ 14, 1997 | 9,56,290 (ಶೇ.94.97) | ಟಿ.ಎನ್. ಶೇಷನ್ |
| 12 | ಡಾ. ಎ.ಪಿ.ಜೆ. ಅಬ್ದುಲ್ ಕಲಾಂ | ಜುಲೈ 15, 2002 | 9,22,844 (ಶೇ.89.58) | ಕ್ಯಾಪ್ಟನ್ ಲಕ್ಷ್ಮೀ ಸೆಹಗಾಲ್ |
| 13 | ಶ್ರೀಮತಿ ಪ್ರತಿಭಾ ದೇವೀ ಸಿಂಗ್ ಪಾಟೀಲ್ | ಜುಲೈ 19, 2007 | 3,12,926 (ಶೇ.65.57) | ಭೈರವ ಸಿಂಗ್ ಶೆಖಾವತ್ |
| 14 | ಡಾ. ಪ್ರಣಬ್ ಮುಖರ್ಜಿ | ಜುಲೈ 19, 2012 | 7,13,763 (ಶೇ.69.3) | ಪಿ.ಎ. ಸಂಗ್ಮಾ |
| 15 | ಡಾ. ರಾಮನಾಥ ಕೋವಿಂದ್ | ಜುಲೈ 17, 2017 | 7,02,044 (ಶೇ.65.6) | ಮೀರಾ ಕುಮಾರ್ |
| 16 | ದ್ರೌಪದಿ ಮುರ್ಮು | ಜುಲೈ 18, 2022 | 6,76,803 (ಶೇ.64.3) | ಯಶ್ವಂತ್ ಸಿನ್ಹಾ |

**ಮೂಲ: ರಾಜಶೇಖರ್ ಹೆಚ್.ಎಮ್. (2017). ಭಾರತ ಸರ್ಕಾರ ಮತ್ತು ರಾಜಕೀಯ. ಕಿರಣ್ ಪ್ರಕಾಶನ. ಪು. 160**

ರಾಷ್ಟ್ರಾಧ್ಯಕ್ಷರ ಚುನಾವಣೆಯ ಕ್ರಮಬದ್ಧತೆಯನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಬಹುದು. ಪ್ರಥಮ ಬಾರಿಗೆ 1967ರಲ್ಲಿ ಜಾಕೀರ್ ಹುಸೇನ್ ಅವರ ಆಯ್ಕೆಯನ್ನು

ಸುಪ್ರೀಂಕೋರ್ಟ್ ಎತ್ತಿ ಹಿಡಿಯಿತು. ಮತ್ತು 1969ರಲ್ಲಿ ವಿ.ವಿ. ಗಿರಿಯವರ ಆಯ್ಕೆಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿಯಿತು. 1975ರ ಜೂನ್ ತಿಂಗಳಲ್ಲಿ ಇಂದಿರಾ ಗಾಂಧಿಯವರ ಆಯ್ಕೆಯನ್ನು ಅಲಹಾಬಾದ್ ಹೈಕೋರ್ಟ್ ಅನೂರ್ಜಿತಗೊಳಿಸಿತು. ಇದರಿಂದಾಗಿ, 1977ರ ಫೆಬ್ರವರಿಯಲ್ಲಿ ಅಂದಿನ ಕೇಂದ್ರ ಸರ್ಕಾರ ಕೆಲವು ಬದಲಾವಣೆಗಳನ್ನು ಮಾಡಲು ಎರಡು ಸುಗ್ರೀವಾಜ್ಞೆಗಳನ್ನು ಹೊರಡಿಸಿತ್ತು. ರಾಷ್ಟ್ರಾಧ್ಯಕ್ಷ, ಉಪರಾಷ್ಟ್ರಪತಿ, ಪ್ರಧಾನಮಂತ್ರಿ ಮತ್ತು ಸ್ಪೀಕರ್ ಇವರುಗಳ ಚುನಾವಣೆಗೆ ಸಂಬಂಧಿಸಿದಂತಹ ವಿವಾದಗಳನ್ನು ವಿಚಾರಣೆ ಮಾಡಲು ಎರಡು ಮಂಡಳಿಗಳನ್ನು ರಚಿಸಲು ಅವಕಾಶ ಕಲ್ಪಿಸಿತು. ಆದರೆ, 1977ರ ಮಾರ್ಚಿಯಲ್ಲಿ ಅಧಿಕಾರಕ್ಕೆ ಬಂದ ಜನತಾ ಸರ್ಕಾರ ಆ ಎರಡು ಸುಗ್ರೀವಾಜ್ಞೆಗಳನ್ನು ರದ್ದುಗೊಳಿಸಿತು. ಪರಿಣಾಮವಾಗಿ, ರಾಷ್ಟ್ರಾಧ್ಯಕ್ಷರು, ಉಪರಾಷ್ಟ್ರಪತಿ, ಪ್ರಧಾನಮಂತ್ರಿ ಮತ್ತು ಸ್ಪೀಕರ್ ಅವರ ಚುನಾವಣೆಗಳನ್ನು ಈ ಮೊದಲಿನಂತೆಯೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಬಹುದಾಗಿದೆ.

**ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿರುವ ಲೋಪ ದೋಷಗಳು**

ಭಾರತದ ರಾಷ್ಟ್ರಾಧ್ಯಕ್ಷರ ಚುನಾವಣೆಗೆ ಸಂಬಂಧಿಸಿದಂತೆ ಸಂವಿಧಾನ ರಚನಾ ಸಭೆಯಲ್ಲೂ ಸಹ ಸಾಕಷ್ಟು ಚರ್ಚೆಗಳು ನಡೆದಿದ್ದವು. ಅಂತಿಮವಾಗಿ ಸಂಸತ್ತಿನ ಉಭಯ ಸದನಗಳ ಹಾಗೂ ರಾಜ್ಯ ಶಾಸಕಾಂಗದ ವಿಧಾನಸಭೆಯ ಚುನಾಯಿತ ಸದಸ್ಯರುಗಳು ಮೂಲಕ ರಾಷ್ಟ್ರಾಧ್ಯಕ್ಷರನ್ನು ಆಯ್ಕೆ ಮಾಡಬೇಕು ಎಂಬ ತೀರ್ಮಾನಕ್ಕೆ ಬರಲಾಯಿತು. ಅದರನ್ವಯ ನಮ್ಮ ದೇಶದಲ್ಲಿ ಇಲ್ಲಿಯವರೆಗೆ ಹದಿನಾರು ಜನ ರಾಷ್ಟ್ರಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಆದಾಗ್ಯೂ ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಕೆಲವು ದೋಷಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ, ಭಾರತದ ಪ್ರಥಮ ಪ್ರಜೆಯಾದ ರಾಷ್ಟ್ರಾಧ್ಯಕ್ಷರ ಚುನಾವಣೆಯ ಬಗ್ಗೆ ಈ ದೇಶದ ಸಾಮಾನ್ಯ ಜನರಿಗೆ ಅಷ್ಟಾಗಿ ಮಾಹಿತಿ ಇರುವುದಿಲ್ಲ ಹಾಗೂ ಅವರ ಚುನಾವಣಾ ವಿಧಾನವು ಕೂಡ ಆಗುವುದಿಲ್ಲ. ಆಡಳಿತ ಪಕ್ಷದ ಬೆಂಬಲವಿಲ್ಲದ ಅಭ್ಯರ್ಥಿಯ ಗೆಲುವು ಸಾಮಾನ್ಯವಾಗಿದ್ದು, ಇತರರು ಗೆಲ್ಲುವುದು ಕಷ್ಟವಾಗಿರುತ್ತದೆ. ಆಡಳಿತ ಪಕ್ಷದ ಬೆಂಬಲದೊಂದಿಗೆ ಆಯ್ಕೆ ರಾಷ್ಟ್ರಾಧ್ಯಕ್ಷರು ಅವರ ಪರವಾಗಿ ಕೆಲಸ ನಿರ್ವಹಿಸುವ ಸಾಧ್ಯತೆಯಿರುತ್ತದೆ. ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಸಂಸತ್ತಿನ ಮತ್ತು ರಾಜ್ಯ ವಿಧಾನಸಭೆಗಳ ನಾಮಕರಣಗೊಂಡ ಸದಸ್ಯರು ಭಾಗವಹಿಸಲು ಅವಕಾಶವಿಲ್ಲ. ಆದರೆ ರಾಷ್ಟ್ರಾಧ್ಯಕ್ಷರನ್ನು ಪದಚ್ಯುತಿಗೊಳಿಸಲು ನಿರ್ಧರಿಸಿದಾಗ ಸಂಸತ್ತಿನ ನಾಮಕರಣಗೊಂಡ ಸದಸ್ಯರು ಭಾಗವಹಿಸಲು ಅವಕಾಶವಿದೆ. ಇದು ಸರಿಯಲ್ಲ ಎಂಬುದು ತಜ್ಞರ ಅಭಿಪ್ರಾಯವಾಗಿದೆ. ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಎಲ್ಲಾ ರಾಜ್ಯಗಳ ವಿಧಾನ ಸಭೆಯ ಸದಸ್ಯರು ಕೆಲವೊಮ್ಮೆ ಭಾಗವಹಿಸಲು ಅವಕಾಶವಿರುವುದಿಲ್ಲ. ಅಂದರೆ, ಯಾವುದಾದರೂ ರಾಜ್ಯದ ವಿಧಾನಸಭೆ ವಿಸರ್ಜನೆಯಾಗಿದ್ದರೆ ಆ ರಾಜ್ಯವನ್ನು ಹೊರತು ಪಡಿಸಿ ಉಳಿದ ರಾಜ್ಯದ ವಿಧಾನ ಸಭೆಯ ಸದಸ್ಯರು ಮಾತ್ರ ಭಾಗವಹಿಸಲು ಸಾಧ್ಯವಾಗುತ್ತದೆ.

ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಕೇಂದ್ರ ಸರ್ಕಾರ ತನಗೆ ಬೇಕಿಲ್ಲದ ರಾಜ್ಯ ಸರ್ಕಾರವನ್ನು ವಜಾ ಮಾಡಿ, ವಿಧಾನ ಸಭೆಯನ್ನು ವಿಸರ್ಜಿಸಿ ಚುನಾವಣೆಯನ್ನು ನಡೆಸಬಹುದಾಗಿದೆ, ಹಾಗೂ ಕೇಂದ್ರದಲ್ಲಿ ಆಡಳಿತ ನಡೆಸುವ ಪಕ್ಷವೇ ರಾಜ್ಯಗಳಲ್ಲಿಯೂ ಅಧಿಕಾರದಲ್ಲಿದರೆ ರಾಷ್ಟ್ರಾಧ್ಯಕ್ಷರ ಚುನಾವಣೆಯ ಗೆಲುವು ಕೇಂದ್ರ ಸರ್ಕಾರ ಆಯ್ಕೆ ಮಾಡುವ ಅಭ್ಯರ್ಥಿಯ ಪರವಾಗಿಯೇ ಇರುತ್ತದೆ. ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸುವವರು ಇಬ್ಬರು ಮಾತ್ರವೇ ಆಗಿರುತ್ತಾರೆ. ಇದರಿಂದಾಗಿ ಪ್ರಬಲ

ಸ್ಪರ್ಧೆಯೇ ಇಲ್ಲದಂತಾಗಿದೆ. ಇದಲ್ಲದೆ ರಾಷ್ಟ್ರಾಧ್ಯಕ್ಷರ ಹುದ್ದೆ ನಾಮಮಾತ್ರ ಕಾರ್ಯಾಂಗವಾಗಿರುವುದ್ದರಿಂದ ಅಭ್ಯರ್ಥಿಗಳು ಹೆಚ್ಚಾಗಿ ಸ್ಪರ್ಧಿಸಲು ಇಷ್ಟ ಪಡುತ್ತಿಲ್ಲ.

ರಾಷ್ಟ್ರದ ಆಡಳಿತ ವ್ಯವಸ್ಥೆ ರಾಷ್ಟ್ರಾಧ್ಯಕ್ಷರ ಹೆಸರಿನಲ್ಲಿಯೇ ನಡೆಯುತ್ತದೆ. ಆದರೆ ಇವರ ಚುನಾವಣೆಯಲ್ಲಿ ಪರೋಕ್ಷ ವಿಧಾನವನ್ನು ಅನುಸರಿಸಲಾಗುತ್ತದೆ. ಇದರಿಂದಾಗಿ ವಯಸ್ಕ ಮತದಾರರ ಪಾತ್ರ ಇಲ್ಲದಂತಾಗಿದೆ. ಸಾಮಾನ್ಯ ಜನರ ರಾಜಕೀಯ ಹಕ್ಕು ಚಲಾವಣೆಯಾಗುವುದಿಲ್ಲ. ಬದಲಿಗೆ ಚುನಾವಣೆಯಲ್ಲಿ ಜನರಿಂದ ಚುನಾಯಿತರಾಗುವ ಜನಪ್ರತಿನಿಧಿಗಳು ಮತದಾರರಾಗಿರುತ್ತಾರೆ. ಇವರು ಮತದಾನ ಮಾಡುವುದು ಪಕ್ಷದ ಪರವಾಗಿ ಸ್ಪರ್ಧಿಸುವ ಆಭ್ಯರ್ಥಿಯ ಪರವಾಗಿಯೇ ಇರುತ್ತದೆ. ವೈಯಕ್ತಿಕವಾಗಿ ತಮಗೆ ಇಷ್ಟ ಬಂದ ಅಭ್ಯರ್ಥಿಯನ್ನು ಚುನಾಯಿಸಲು ಅವಕಾಶವಿರುವುದಿಲ್ಲ. ಈ ರೀತಿ, ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಸಾಕಷ್ಟು ದೋಷಗಳಿರುವುದನ್ನು ಗುರುತಿಸಬಹುದಾಗಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಅನೇಕ ದೋಷಗಳ ನಡುವೆಯೂ ರಾಷ್ಟ್ರಾಧ್ಯಕ್ಷರನ್ನು ಪರೋಕ್ಷ ಚುನಾವಣೆಯ ಮೂಲಕ ಆಯ್ಕೆ ಮಾಡಲಾಗುತ್ತಿದೆ. ಬಹುಶಃ ಸಂಸದೀಯ ಪದ್ಧತಿಯಲ್ಲಿ ರಾಷ್ಟ್ರಾಧ್ಯಕ್ಷರು ಕೇವಲ ನಾಮಮಾತ್ರ ಕಾರ್ಯಾಂಗ ಎಂಬ ಕಾರಣಕ್ಕಾಗಿ ಇವರ ಚುನಾವಣೆಯನ್ನು ಅಷ್ಟೊಂದು ಗಂಭೀರವಾಗಿ ಪರಿಗಣಿಸಿಲ್ಲ ಎನ್ನಬಹುದಾಗಿದೆ. ಆದರೂ ಸಹ ಚುನಾವಣೆಯಲ್ಲಿ ಸಾಕಷ್ಟು ಸುಧಾರಣೆಯಾಗಬೇಕಿದೆ.

**ಕೊನೆಟಿಪ್ಪಣಿಗಳು**


1. *ಕಾನ್ಸ್ಟಿಟ್ಯೂಂಟ್ ಅಸೆಂಬ್ಲಿ ಡಿಬೇಟ್ಸ್.* ವಾಲ್ಯೂಮ್.7, 991–93, ಮತ್ತು ವಾಲ್ಯೂಮ್.4 ಪು.826–36.
2. *ಭಾರತ ಸಂವಿಧಾನದ ರಚನಾಸಭೆಯ ಚರ್ಚೆಗಳು (ನಡಾವಳಿಗಳು) ಸಂಪುಟ 2.* (2021). ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ. ಪು. 70.
3. ಅದೇ. ಪು.77
4. ಪೂರ್ವೋಕ್ತ–1, ಪು.734.
5. ಅದೇ. ಪು. 991–94
6. ರಾಜಶೇಖರ್. ಹೆಚ್.ಎಮ್. (2017). ಭಾರತ ಸರ್ಕಾರ ಮತ್ತು ರಾಜಕೀಯ. ಕಿರಣ್ ಪ್ರಕಾಶನ. ಪು.158.
7. ವಿಜಯವಾಣಿ ದಿನಪತ್ರಿಕೆ. (2022, ಜುಲೈ 15). ಪು.2
8. ಪೂರ್ವೋಕ್ತ–6, ಪು.158–159.